# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ನವೆಂಬರ್ 27, 2020

ಸಂಪುಟ : 47 ಸಂಚಿಕೆ : 207 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ರೈತ-ಕಾರ್ಮಿಕ ವಿರೋಧಿ ನೀತಿಗೆ ಧಿಕ್ಕಾರ

### ಜೆಸಿಟಿಯು ಕರೆ ನೀಡಿದ್ದ ಮುಷ್ಕರದಲ್ಲಿ ಧುಮುಕಿದ ನಗರದ ಶ್ರಮಿಕ ಸಂಘಟನೆಗಳು

ದಾವಣಗೆರೆ, ನ. 26 - ಕಾರ್ಮಿಕ ವಿರೋಧಿ ಸಂಹಿತೆಗಳ ವಾಪಸ್, ರೈತ ವಿರೋಧಿ ಕಾನೂನು ವಾಪಸಾತಿ, ಕೊರೊನಾ ಸಂಕಷ್ಟದ ನೆರವು, 10 ಕೆಜಿ ಉಚಿತ ಪಡಿತರ, ಸರ್ಕಾರಿ ಕಂಪನಿಗಳ ಖಾಸಗೀಕರಣ ತಡೆ, ಸಾರ್ವತ್ರಿಕ ಪಿಂಚಣಿ ಸೇರಿದಂತೆ ಹಲವಾರು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆ.ಸಿ.ಟಿ.ಯು.) ವತಿಯಿಂದ ಇಂದು ಕರೆ ನೀಡಲಾಗಿದ್ದ ಅಖಿಲ ಭಾರತ ಮುಷ್ಕರದ ಹಿನ್ನೆಲೆಯಲ್ಲಿ ನಗರದಲ್ಲೂ ಪ್ರತಿಭಟನೆ ನಡೆಸಲಾಯಿತು.

ಐ.ಎನ್.ಟಿ.ಯು.ಸಿ, ಎ.ಐ.ಟಿ.ಯು.ಸಿ., ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ನೆರಳು ಬೀಡಿ ಯೂನಿಯನ್ ಸೇರಿದಂತೆ ರೈತ, ಕಾರ್ಮಿಕ, ಬ್ಯಾಂಕಿಂಗ್, ಎಲ್.ಐ.ಸಿ., ಕೆ.ಎಸ್.ಆರ್.ಟಿ.ಸಿ., ಬೀದಿ ಬದಿ ವ್ಯಾಪಾರಿಗಳು, ಹಮಾಲಿಗಳು ಸೇರಿದಂತೆ ಹಲವಾರು ಶ್ರಮಿಕರ ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗಿಯಾಗಿ ಕೇಂದ್ರ ಸರ್ಕಾರದ ನೀತಿಗಳನ್ನು ಖಂಡಿಸಿದವು.

ಕೊರೊನಾ ಸಾಂಕ್ರಾಮಿಕದಿಂದ ಸಂಕಷ್ಟದಲ್ಲಿರುವ ಕಾರ್ಮಿಕರ ಹಿತ ಕಾಪಾಡದೇ, ಮತ್ತಷ್ಟು ಸಂಕಷ್ಟಕ್ಕೆ ದೂಡಲಾಗಿದೆ. ಅನ್ನದಾತ ರೈತ ಹಾಗೂ ಸಂಪತ್ತು ಸೃಷ್ಟಿಸುವ ಶ್ರಮಿಕನನ್ನು ಗುಲಾಮಗಿರಿಗೆ ತಳ್ಳಲಾಗುತ್ತಿದೆ. ಎಲ್ಐಸಿ, ಬ್ಯಾಂಕ್, ರಕ್ಷಣಾ ವಲಯ, ರೈಲ್ವೆ, ಬಿಎಸ್ಎನ್ಎಲ್‌ಗಳನ್ನು ಖಾಸಗೀಕರಣಗೊಳಿಸಲಾಗುತ್ತಿದೆ ಎಂದು ಪ್ರತಿಭಟನೆಯಲ್ಲಿ ಆಕ್ರೋಶ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜೆ.ಸಿ.ಟಿ.ಯು. ಜಿಲ್ಲಾಧ್ಯಕ್ಷ ಹೆಚ್.ಕೆ. ರಾಮಚಂದ್ರಪ್ಪ, ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಕಾರ್ಮಿಕರು ಹಾಗೂ ರೈತರ (2ನೇ ಪುಟಕ್ಕೆ)

### ಖಾಸಗೀಕರಣ ನಿಲ್ಲಿಸಿ, ವೇತನ - ಪಿಂಚಣಿ ಕೊಡಿ

ಹಣಕಾಸಿನಿಂದ ಹಿಡಿದು ರಕ್ಷಣೆಯವರೆಗಿನ ಹಲವು ಉದ್ಯಮಗಳ ಖಾಸಗೀಕರಣ ನಿಲ್ಲಿಸಬೇಕು ಎಂಬುದೂ ಸೇರಿದಂತೆ ಏಳು ಬೇಡಿಕೆಗಳನ್ನು ಪ್ರತಿಭಟನಾಕಾರರು ಮುಂದಿಟ್ಟಿದ್ದಾರೆ.

ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳು ಮತ್ತು ರೈತ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು, ಉದ್ಯೋಗ ಖಾತ್ರಿ ಯೋಜನೆ ನಗರಕ್ಕೂ ವಿಸ್ತರಿಸಿ 200 ದಿನಗಳ ಉದ್ಯೋಗ ನೀಡಬೇಕು, ಆದಾಯ ತೆರಿಗೆ ವ್ಯಾಪ್ತಿ ಹೊರಗಿನ ಕುಟುಂಬಗಳಿಗೆ ತಿಂಗಳಿಗೆ 7,500 ರೂ. ನಗದು, 10 (2ನೇ ಪುಟಕ್ಕೆ)

## ಅಕ್ರಮ ಹಣ : ಕಾಕ್ಸ್ ಅಂಡ್ ಕಿಂಗ್ಸ್‌ನ ಕೆರ್ಕರ್ ಬಂಧನ

ನವದೆಹಲಿ, ನ. 26 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಕ್ಸ್ ಅಂಡ್ ಕಿಂಗ್ಸ್ ಪ್ರವರ್ತಕ ಪೀಟರ್ ಕೆರ್ಕರ್ ಅವರನ್ನು ಜಾರಿ ನಿರ್ದೇಶನಾಲಯ ಗುರುವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆರ್ಕರ್ ಅಲಿಯಾಸ್ ಅಜಯ್ ಅಜಿತ್ ಪೀಟರ್ ಯೆಸ್ ಬ್ಯಾಂಕ್ ಸಾಲ ಬಾಕಿ ಪ್ರಕರಣದಲ್ಲಿ ಅಕ್ರಮ ಹಣ ಹೊಂದಿರುವುದಾಗಿ ಆರೋಪಿಸಲಾಗಿದೆ.

ಕಾಕ್ಸ್ ಅಂಡ್ ಕಿಂಗ್ಸ್ ಸಮೂಹದಿಂದ ಯೆಸ್ ಬ್ಯಾಂಕ್‌ಗೆ 3,642 ಕೋಟಿ ರೂ.ಗಳ ಸಾಲ ಬಾಕಿ ಬರಬೇಕಿದೆ. ಈ ಪ್ರಕರಣದಲ್ಲಿ ಕೆರ್ಕರ್ ಹೊಂದಿರುವ ಪಾತ್ರದ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

ಪ್ರವಾಸ ಸೇವಾ (2ನೇ ಪುಟಕ್ಕೆ)

## ಪ್ರಾಂತೀಯ ಭಾಷೆಯಲ್ಲಿ ತಾಂತ್ರಿಕ ಶಿಕ್ಷಣ

ನವದೆಹಲಿ, ನ. 26 – ಮುಂದಿನ ಶೈಕ್ಷಣಿಕ ವರ್ಷದಿಂದ ಇಂಜಿನಿಯರಿಂಗ್ ಸೇರಿದಂತೆ ತಾಂತ್ರಿಕ ಶಿಕ್ಷಣವನ್ನು ಪ್ರಾಂತೀಯ ಭಾಷೆಗಳಲ್ಲಿ ನೀಡಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಅವರ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಪರಿಶೀಲನಾ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ತಾಂತ್ರಿಕ ಶಿಕ್ಷಣ ಅದರಲ್ಲೂ ಇಂಜಿನಿಯರಿಂಗ್ ಕೋರ್ಸ್‌ಗಳನ್ನು ಮಾತೃಭಾಷೆಯ ಮೂಲಕ ನೀಡಲು ನಿರ್ಧರಿಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಈ ಕ್ರಮ ಜಾರಿಗೆ ಬರಲಿದೆ. ಇದಕ್ಕಾಗಿ ಕೆಲ ಐ.ಐ.ಟಿ. ಹಾಗೂ ಎನ್.ಐ.ಟಿ.ಗಳನ್ನು ಗುರುತಿಸಲಾಗಿದೆ ಎಂದು ಸಚಿವಾಲಯದ ಹಿರಿಯ (2ನೇ ಪುಟಕ್ಕೆ)






## ಜೈಲಿನಿಂದ ಸಚಿವ ಸ್ಥಾನದ ಆಮಿಷ ಒಡ್ಡಿದ ಲಾಲು ವಿರುದ್ಧ ಎಫ್ಐಆರ್



ಪಾಟ್ನಾ, ನ. 26 – ಜೈಲಿನಲ್ಲಿರುವಾಗಲೇ ಬಿಜೆಪಿ ಶಾಸಕರೊಬ್ಬರಿಗೆ ಕರೆ ಮಾಡಿ ಸಚಿವ ಸ್ಥಾನದ ಆಮಿಷ ಒಡ್ಡಿದ ಆರೋಪದ ಮೇಲೆ ಆರ್.ಜೆ.ಡಿ. ಶಾಸಕ ಲಾಲು ಪ್ರಸಾದ್ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ವಿಧಾನಸಭಾಧ್ಯಕ್ಷರ ಚುನಾವಣೆಯ ವೇಳೆ ಎನ್.ಡಿ.ಎ. ಅಭ್ಯರ್ಥಿಯನ್ನು ಪರಾಭವಗೊಳಿಸಲು ಶಾಸಕ ಲಲನ್ ಕುಮಾರ್ ಪಾಸ್ವಾನ್‌ಗೆ ಲಾಲು ಈ ಆಮಿಷ ಒಡ್ಡಿದ್ದರು ಎಂದು ಆರೋಪಿಸಲಾಗಿದೆ. ಬಿಹಾರದ ಮಾಜಿ ಉಪ ಮುಖ್ಯಮಂತ್ರಿ ಸುಶೀಲ್ ಕುಮಾರ್ ಮೋದಿ ಅವರು ದೂರವಾಣಿ ಕರೆ ಬಗ್ಗೆ ಟ್ವಿಟ್ಟರ್ ಮೂಲಕ ಗಮನ ಸೆಳೆದಿದ್ದರು.

ಶಾಸಕ ಪಾಸ್ವಾನ್ ಅವರಿಗೆ ಕರೆ ಮಾಡಿರುವ ಬಗ್ಗೆ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಎಫ್.ಐ.ಆರ್. ದಾಖಲಿಸಲಾಗಿದೆ ಎಂದು ಮೋದಿ ತಿಳಿಸಿದ್ದಾರೆ. ಪ್ರಸಾದ್ ಪ್ರಸಕ್ತ ರಾಂಚಿ ಜೈಲಿನಲ್ಲಿದ್ದು, ಮೇವು ಹಗರಣ ಪ್ರಕರಣಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ.

ಈ ಬೆಳವಣಿಗೆ ನಂತರ ಲಾಲು ಅವರನ್ನು ರಾಂಚಿ ಆಸ್ಪತ್ರೆಯ ನಿರ್ದೇಶಕರ ಬಂಗಲೆಯಿಂದ ಆಸ್ಪತ್ರೆಯ ವಾರ್ಡ್‌ಗೆ ವರ್ಗಾಯಿಸಲಾಗಿದೆ. ಜೈಲಿನಲ್ಲಿದ್ದ ಲಾಲು ಅನಾರೋಗ್ಯ ಪೀಡಿತರಾಗಿ ದ್ದಾರೆಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಅವರ ಆಪ್ತ ಸಹಾಯಕನಿಗೆ ಕೊರೊನಾ ಬಂದಿದೆ ಎಂದು ಬಂಗಲೆಗೆ (2ನೇ ಪುಟಕ್ಕೆ)

## ಲಿಂಗಾಯತ ಪಂಚಮಸಾಲಿ ಮೀಸಲಾತಿ ಕೆಲವೇ ದಿನಗಳಲ್ಲಿ ಒಳ್ಳೆಯ ನಿರ್ಧಾರ



ಕೂಡಲಸಂಗಮ ಪಂಚಮಸಾಲಿ ಜಗದ್ಗುರುಗಳಿಗೆ ಸಿಎಂ ಭರವಸೆ

ಬೆಂಗಳೂರು, ನ.26- ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ರಾಜ್ಯ ಸರ್ಕಾರದ 2ಎ ಹಾಗೂ ಕೇಂದ್ರ ಸರ್ಕಾರದ ಒಬಿಸಿ ಮೀಸಲಾತಿ ಹಕ್ಕೊತ್ತಾಯಕ್ಕೆ ಕೆಲವೇ ದಿನಗಳಲ್ಲಿ ಒಳ್ಳೆಯ ನಿರ್ಧಾರವನ್ನು ಕೈಗೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಗುರುವಾರ ತಮ್ಮನ್ನು ಭೇಟಿ ಮಾಡಿದ ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದ ನಿಯೋಗಕ್ಕೆ ಸಕಾರಾತ್ಮಕ ಭರವಸೆ ನೀಡಿದ್ದಾರೆ.

ಪಂಚಮಸಾಲಿ ಮೀಸಲಾತಿಗಾಗಿ ಆಗ್ರಹಿಸಿ, ಕೂಡಲಸಂಗಮ ಜಗದ್ಗುರುಗಳವರು ಕಳೆದ ಆಕ್ಟೋಬರ್ 28 ರಂದು ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂಭಾಗ ದಲ್ಲಿ ಐತಿಹಾಸಿಕ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಸತ್ಯಾಗ್ರಹದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ದೂರವಾಣಿ ಕರೆ ಮೂಲಕ ಉಪವಾಸ ಕೈಬಿಡುವಂತೆ ಸಂಪರ್ಕಿಸಿದಾಗ, ನವೆಂಬರ್ 28 ರೊಳಗಾಗಿ ಸರ್ಕಾರ ಸ್ಪಂದಿಸಬೇಕು ಎಂಬ ಕಾಲಮಿತಿಯನ್ನು ಸಿಎಂ ರವರು ಒಪ್ಪಿದ ಮೇಲೆ ಶ್ರೀಗಳು ಸತ್ಯಾಗ್ರಹವನ್ನು (2ನೇ ಪುಟಕ್ಕೆ)










**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ 30x40 ಪಶ್ಚಿಮ 30x40 ಪೂರ್ವ, ಕುವೆಂಪು ಬಡಾವಣೆ 30x50, ಉತ್ತರ 40x60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ 30x50 ಪಶ್ಚಿಮ, 35x60 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ 30x40 ಉತ್ತರ ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ :
95911 60520
99457 02495

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಸೈಟುಗಳು ಮಾರಾಟಕ್ಕೆ (KHB)**
50x80 ಉತ್ತರ, 100x80 ಉತ್ತರ, 30x50 ಪೂರ್ವ, 40x50 ಪೂರ್ವ, 40x50 ಉತ್ತರ, 80x50 ಉತ್ತರ, 50x80 ದಕ್ಷಿಣ, 60x80 ಪೂರ್ವ, 50x80 ಪಶ್ಚಿಮ, 40x60 ಪೂರ್ವ, 40x60 ಪಶ್ಚಿಮ, 30x40 ಉತ್ತರ ಇನ್ನೂ ಅನೇಕ.
ಕಿರಣ್ ಬೂಸ್ನೂರ್ (ಏಜೆಂಟ್)
ಆಫೀಸ್ ನಂ. 97315-63409
98440-63409

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಸೈಟು ಮಾರಾಟಕ್ಕೆ (899 ರೂ. ಅಡಿಗೆ)**
ಕುಂದುವಾಡ ಬೈಪಾಸ್ ಪಕ್ಕ ಎಂ.ಬಿ. ಸಿಟಿಯಲ್ಲಿ
30x50, 40x74, 30x63, 60x40, 60x50, 50x50, 85x52, 50x43
ಕಿರಣ್ ಬೂಸ್ನೂರ್ (ಏಜೆಂಟ್)
ಆಫೀಸ್ ನಂ. 97315-63409
98440-63409
(ನೇರವಾದ ವ್ಯಾಪಾರ, ಸ್ವಚ್ಛ ದಾಖಲೆ, ಸರಿಯಾದ ಅಳತೆಯ ಗುರಿ ನಮ್ಮದು)

**ಕರ್ನಾಟಕ ಗೃಹಮಂಡಳಿಯಲ್ಲಿ ಮನೆಗಳು, ಸೈಟ್‌ಗಳು ಮಾರಾಟಕ್ಕಿವೆ**
30x50 North, 38 ಲಕ್ಷಗಳು, 40x50, 40x50 North ಅಕ್ಕ-ಪಕ್ಕ 30x50 East, 30x50 South, 30x40 South. Rate 900 - 1500 ವರೆಗೆ
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಕುಂದವಾಡ ಕೆರೆಯಿಂದ ಕೆಳಗಡೆ
Lake View 30x60 North, 30x60 South, 60x60 North, 60x60 South. Rate 1700/-
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x36 ಉತ್ತರ, 40x50 ಪೂರ್ವ, ಶಿವಪಾರ್ವತಿ ಬಡಾವಣೆಯಲ್ಲಿ 40x60 ಪೂರ್ವ 40 ಅಡಿ ರಸ್ತೆಗೆ ಹೊಂದಿಕೊಂಡ 30x50 ಪೂರ್ವ, 30x50 ಪಶ್ಚಿಮ. 24 ಸಾವಿರ ಅಡಿ (ಏಕ ನಿವೇಶನ) ಮಾರಾಟಕ್ಕಿದೆ.
ಶಾಮನೂರು ಧನ್ಯಕುಮಾರ್ 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಬೇಕಾಗಿದ್ದಾರೆ**
ಅನುಭವವುಳ್ಳ ಸೆಕ್ಯುರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳದೊಂದಿಗೆ ESI+PF ಸೌಲಭ್ಯ ಇರುತ್ತದೆ. ಸಂಪರ್ಕಿಸಿ :
94358 83109 / 98448 18900

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ.
ಆಕರ್ಷಕ ವೇತನ ನೀಡಲಾಗುವುದು (ಪುರಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ಅಂಗಡಿ ಬಾಡಿಗೆಗೆ**
ಹೋಟೆಲ್ ಪಕ್ಕ ಬೀಡಿ/ಬೀಡಾ ಅಂಗಡಿ ಬಾಡಿಗೆಗಿದೆ ವಿಚಾರಿಸಿ. ಪಿಸಾಳೆ ಕಾಂಪೌಂಡ್, ಪಿ.ಬಿ.ರಸ್ತೆ, ದಾವಣಗೆರೆ.
97407 40315
90601 65011

**ಮನೆ ಮಾರಾಟ**
15x40 ರಲ್ಲಿ ಸಿಂಗಲ್ ಬೆಡ್ ರೂಂನ ಮಹಡಿ ಮನೆ ಮಾರಾಟಕ್ಕಿದೆ.
ಪೆಟ್ರೋಲ್ ಬಂಕ್ ಹಿಂಭಾಗ.
89717 21755

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಸಂಪರ್ಕಿಸಿ :
89715 04492
81056 99985
99004 67508

**Avoid Mosquitoes**
Mosquito Net for door and windows
Sri Gowri Enterprises
# 7C2, 4th cross, Near D.C. Office, Karur Industrial Area, P.B. Road Davanagere.
72049 94628

**ಸೈಟ್ ಮಾರಾಟಕ್ಕಿದೆ**
ತುಂಗಭದ್ರಾ ಬಡಾವಣೆ 100 ಅಡಿ ರಸ್ತೆಯಲ್ಲಿರುವ ಸೈಟು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ. ಮಧ್ಯವರ್ತಿಗಳಿಗೆ ಅವಕಾಶ ಇರುವುದಿಲ್ಲ.
98457 13223

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**Change Of Name**
I Smt Rohini B.V. w/o Sri Vijaya B.V. 26 Years,resident @ 1649/52B, Boosnur Nilaya, 1st Main, LIC Colony Davanagere. my Name has entered in Education as Record as Tejaswini K.R after my maneger my name as smt Rohini B.V. as per this affidavit is stated befor Notary Davanagere on 26.11.2020 that on above two names are me only and to none else. in future I Shall continue my name as Smt Rohini B.V.
Smt Rohini B.V.

**ಸೈಟ್ ಮಾರಾಟಕ್ಕಿದೆ**
ಎಸ್.ಎಸ್.ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್‌ನಲ್ಲಿರುವ ಪೆಟ್ರೋಲ್ ಬಂಕ್ ಪಕ್ಕದ ಸೈಟ್ ಸುಮಾರು 3404 ಚ.ಅಡಿ. ಮಾರಾಟಕ್ಕಿದೆ.
81399 88555
81973 00410

**ತಕ್ಷಣ ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ತಿಂಡಿ ಭಟ್ಟರು ಹಾಗೂ ಸಹಾಯಕರು ಬೇಕಾಗಿದ್ದಾರೆ. ಬೆಳಿಗ್ಗೆ 6 ರಿಂದ ಸಂಜೆ 4ರವರೆಗೆ. ವಸತಿ ಸೌಕರ್ಯ ಇರುತ್ತದೆ. ಸಂಪರ್ಕಿಸಿ :
99022 72893

**ಭೂಮಿಕಾ ಮ್ಯಾಟ್ರಿಮನಿ**
ಲಿಂಗಾಯತ ವಧು-ವರರ ಕೇಂದ್ರ
H.O: Vidya Nagara, 1st Bus Stop, Davangere.
B.O: BIET College Road, Near Hemavati Hostel
7760316576, 9008055813


ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**WANTED**
ACCOUNTANT B.com/ BBM / BCA /M.COM /MBA FRESHERS/ EXPERIENCE IN MNC COMPANY DAVANAGERE.
CONTACT :
95380 03302
99866 92789

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869


## ಶಾಮನೂರು ಕೋಟೆಬಾಗಿಲು ಸಿದ್ದಣ್ಣ (ಹೆಚ್.ಎನ್. ಸಿದ್ದೇಶ್ವರ) ನಿಧನ



ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆ 4ನೇ ಮುಖ್ಯ ರಸ್ತೆ ವಾಸಿ ಶ್ರೀ ಹೆಚ್.ಎನ್. ಸಿದ್ದೇಶ್ವರ (ಶಾಮನೂರು ಕೋಟೆಬಾಗಿಲು ಸಿದ್ದಣ್ಣ) ಅವರು ದಿನಾಂಕ 26.11.2020ರ ಗುರುವಾರ ಸಂಜೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 55 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ದಿನಾಂಕ 27.11.2020ರ ಶುಕ್ರವಾರ ಬೆಳಿಗ್ಗೆ 8.30ರವರೆಗೆ ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆ 4ನೇ ಮುಖ್ಯ ರಸ್ತೆಯ ಮೃತರ ಸ್ವಗೃಹದಲ್ಲಿ ಮೃತರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು. ಮಧ್ಯಾಹ್ನ 1.30ಕ್ಕೆ ಗಂಟೆಗೆ ಮೃತರ ಸ್ವಗ್ರಾಮ ಹೊಳಲ್ಕೆರೆ ತಾಲ್ಲೂಕು ಬಿ. ದುರ್ಗ ಹೋಬಳಿ ಹಿರಿಯೂರಿನಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

# ಹರಿಹರ : 129 ಕೋಟಿ ರೂ. ಅನುದಾನ ತಡೆಹಿಡಿದ ಬಿಜೆಪಿ ಸರ್ಕಾರ

## ಶಾಸಕ ರಾಮಪ್ಪ ಆರೋಪ



ಹರಿಹರ, ನ.26 - ಹರಿಹರ ಕ್ಷೇತ್ರದ ಸುಮಾರು 129 ಕೋಟಿ ರೂ. ರಸ್ತೆ, ಸೇತುವೆ, ಕೆರೆ ಮತ್ತು ಇತರೆ ಅಭಿವೃದ್ಧಿ ಯೋಜನೆಗಳಿಗೆ ಮಂಜೂರಾದ ಅನುದಾನವನ್ನು ಬಿಜೆಪಿ ಸರ್ಕಾರ ತಡೆಹಿಡಿದಿದೆ ಎಂದು ಶಾಸಕ ಎಸ್. ರಾಮಪ್ಪ ಆರೋಪಿಸಿದರು.

ಇಲ್ಲಿನ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ಇಂದು ನಡೆದ ಹರಿಹರ ತಾಲ್ಲೂಕು ಕಟ್ಟಡ ಕಾರ್ಮಿಕರ ಸೇವಾ ಸಂಘಗಳ ಹಿತರಕ್ಷಣಾ ಸಮಿತಿಯ ಉದ್ಘಾಟನಾ ಸಮಾರಂಭದಲ್ಲಿ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಇತಿಹಾಸದಲ್ಲಿ ಯೋಜನೆಗಳಿಗೆ ಮಂಜೂರಾದ ಅನುದಾನವನ್ನು ತಡೆಹಿಡಿದಿರುವುದು ಇದೇ ಪ್ರಥಮವಾಗಿದ್ದು, ಇದು ಬಿಜೆಪಿಯ ಸಂಸ್ಕೃತಿಯೆಂದು ಹೇಳಿದರು.

ತಾನು ಗುತ್ತಿಗೆ ಕಾರ್ಮಿಕನಾಗಿ, ಕಾರ್ಮಿಕ, ಕಾರ್ಮಿಕ ನಾಯಕನಾಗಿ ನಂತರ ರಾಜಕೀಯ ಪ್ರವೇಶಿಸಿ ನಗರಸಭೆಯ ಸದಸ್ಯ, ಅಧ್ಯಕ್ಷನಾಗಿ ಇಂದು ಶಾಸಕನಾಗಿ ನಿಮ್ಮ ಮುಂದೆ ನಿಂತಿದ್ದೇನೆ.ಆದ್ದರಿಂದ ಕಾರ್ಮಿಕರ ಕಷ್ಟ, ನೋವುಗಳ ಬಗ್ಗೆ ತಮಗೆ ಸಂಪೂರ್ಣ ಅರಿವಿರುವುದಾಗಿ ಹೇಳಿದರು.

ನಿಜವಾದ ಕಾರ್ಮಿಕರಿಗೆ ಅನುದಾನಗಳು ದೊರೆಯದಿರುವ ಬಗ್ಗೆ ತಮ್ಮ ಗಮನಕ್ಕೆ ಬಂದಿದ್ದು, ಬೋಗಸ್ ಕಾರ್ಡುದಾರರ ಖಾತೆಗಳಿಗೆ ಹಣ ಜಮಾ ಆಗಿರುವುದು ತಿಳಿದುಬಂದಿದೆ. ಸರ್ಕಾರ ತಿಳಿಸಿದಂತೆ ಕಾರ್ಮಿಕ ಇಲಾಖೆಯಲ್ಲಿ 8600 ಕೋಟಿ ರೂ. ಅನುದಾನ ಲಭ್ಯವಿದ್ದು, ದೊರೆಯದೇ ಇರುವವರ ಬಗ್ಗೆ ಪ್ರಯತ್ನಿಸಿ ಅವರಿಗೆ ದೊರಕಿಸುವ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ವ್ಯಕ್ತಪಡಿಸಿದರು.

ಪೌರಾಯುಕ್ತರಾದ ಶ್ರೀಮತಿ ಲಕ್ಷ್ಮಿ, ಇಂಜಿನಿಯರಿಂಗ್ ಸಂಘದ ಅಧ್ಯಕ್ಷ ಶಿವಪ್ರಕಾಶ ಶಾಸ್ತ್ರಿ, ಸಂಘದ ಜಿಲ್ಲಾ ಗೌರವಾಧ್ಯಕ್ಷ ಗಣೇಶಪ್ಪ, ಅಧ್ಯಕ್ಷ ಎನ್.ಕೆ. ಚಂದ್ರಶೇಖರ್ ಮಾತನಾಡಿದರು.

ಸಂಘದ ಅಧ್ಯಕ್ಷ ಎಂ.ಹೆಚ್.ಭೀಮಣ್ಣ ಅಧ್ಯಕ್ಷತೆ ವಹಿಸಿದ್ದರು. ಪ್ರಾಸ್ತಾವಿಕವಾಗಿ ರಾಮಗಿರಿ ಭದ್ರಾಚಾರ್ ಮಾತನಾಡಿದರೆ, ಶಿಲ್ಪಿ ನಾಗರಾಜಾಚಾರ್ ಸ್ವಾಗತಿಸಿದರು.

ಗ್ರೇಡ್-1 ತಹಸೀಲ್ದಾರ್ ಚೆನ್ನವೀರ ಸ್ವಾಮಿ, ನಗರ ಠಾಣಾ ಪಿಎಸ್ಐ ಸುನೀಲ್ ಬಸವರಾಜ್ ತೇಲಿ, ಸಂಘದ ಕಾರ್ಯದರ್ಶಿ ಎಂ.ಎಸ್. ಹಾಲೇಶ್ ಮತ್ತಿತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಭಾಷೆಯಲ್ಲಿ ತಾಂತ್ರಿಕ ಶಿಕ್ಷಣ

**(1ನೇ ಪುಟದಿಂದ)** ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶಾಲಾ ಶಿಕ್ಷಣ ಮಂಡಳಿಗಳ ಈಗಿರುವ ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್.ಟಿ.ಎ.) ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗೆ ಪಠ್ಯ ರೂಪಿಸುವ ಕುರಿತೂ ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಸಕ್ತ ಜೇಇ (ಮೇನ್) ಹಾಗೂ ನೀಟ್ - ಯುಜಿ ಪರೀಕ್ಷೆಗಳನ್ನು ಎನ್.ಟಿ.ಎ ನಡೆಸುತ್ತಿದೆ. ಎನ್.ಟಿ.ಎ. ಇನ್ನು ಮುಂದೆ ಸ್ಪರ್ಧಾತ್ಮಕ ಪರೀಕ್ಷೆಯ ಪಠ್ಯವನ್ನೂ ರೂಪಿಸಲಿದೆ ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ.

ವಿಶ್ವವಿದ್ಯಾನಿಲಯ ಅನುದಾನ ಆಯೋಗವು (ಯು.ಜಿ.ಸಿ.) ಎಲ್ಲಾ ವಿದ್ಯಾರ್ಥಿ ವೇತನ ಸಮರ್ಪಕವಾಗಿ ದೊರೆಯುವಂತೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕಾಗಿ ಸಹಾಯವಾಣಿ ಆರಂಭಿಸಬೇಕು ಹಾಗೂ ವಿದ್ಯಾರ್ಥಿಗಳ ದೂರುಗಳನ್ನು ತಕ್ಷಣವೇ ಬಗೆಹರಿಸಬೇಕು ಎಂದೂ ಸಹ ಸಭೆಯಲ್ಲಿ ತಿಳಿಸಲಾಗಿದೆ.

ಹಿಂದಿ ಸೇರಿದಂತೆ ಒಂಭತ್ತು ಪ್ರಾಂತೀಯ ಭಾಷೆಗಳಲ್ಲಿ 2021ರಿಂದ ಜೇಇ (ಮೇನ್) ಪರೀಕ್ಷೆ ನಡೆಸಲು ಎನ್.ಡಿ.ಎ.ಈಗಾಗಲೇ ನಿರ್ಧಾರ ತೆಗೆದುಕೊಂಡಿದೆ. ಆದರೆ, ಜೇಇ (ಅಡ್ವಾನ್ಸ್ಡ್) ಸಹ ಪ್ರಾಂತೀಯ ಭಾಷೆಯಲ್ಲಿ ನಡೆಸಬೇಕೇ ಎಂಬ ಬಗ್ಗೆ ಐ.ಐ.ಟಿ.ಗಳು ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ.

ಕೊರೊನಾ ಹಿನ್ನೆಲೆಯಲ್ಲಿ ಸಿ.ಬಿ.ಎಸ್.ಇ. ಹಾಗೂ ಸಿ.ಐ.ಎಸ್.ಸಿ.ಇ. ಸೇರಿದಂತೆ ಹಲವಾರು ಶಾಲಾ ಶಿಕ್ಷಣ ಮಂಡಳಿಗಳು ಪಠ್ಯವನ್ನು ಕಡಿತಗೊಳಿಸಿವೆ. ಇದರಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಹಾಗೂ ಶಿಕ್ಷಣದಲ್ಲಿ ಆಗಿರುವ ನಷ್ಟದ ಬಗ್ಗೆ ಇನ್ನೂ ಪರಿಶೀಲನೆ ನಡೆಸಬೇಕಿದೆ.

# ಜಾತಿಗೊಂದು ನಿಗಮ, ಮಂಡಳಿ ಅಸ್ತಿತ್ವಕ್ಕೆ ತರುವುದು ಭ್ರಷ್ಟಾಚಾರಕ್ಕೆ ಅನುಕೂಲ ಮಾಡಿಕೊಟ್ಟಂತೆ



ಹರಪನಹಳ್ಳಿ, ನ.26- ಜಾತಿಗೊಂದು ನಿಗಮ, ಮಂಡಳಿ ಅಸ್ತಿತ್ವಕ್ಕೆ ತರುವುದು ಭ್ರಷ್ಟಾಚಾರಕ್ಕೆ ಅನುಕೂಲ ಮಾಡಿಕೊಟ್ಟಂತೆ, ಸರ್ಕಾರ ವೈಫಲ್ಯ ವಾಗಿರುವುದರಿಂದ ನಿಗಮ ಮಾಡುತ್ತಾರೆ ಎಂದು ವಿಧಾನ ಪರಿಷತ್ ಸದಸ್ಯ ಕೆ.ಸಿ.ಕೊಂಡಯ್ಯ ಛೇಡಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂತಹ ನಿಗಮಗಳಿಂದ ಏನೂ ಉಪಯೋಗವಿಲ್ಲ.ಉದ್ದೇಶಿತ ವಿಜಯನಗರ ಜಿಲ್ಲೆಯವರಿಗೂ ಹೈದ್ರಾಬಾದ್ ಕರ್ನಾಟಕದ 371 ಜೆ ಸೌಲಭ್ಯ ಸಿಕ್ಕೇ ಸಿಗುತ್ತದೆ. ಇದರಲ್ಲಿ ಅನುಮಾನ ಬೇಡ ಎಂದು ಬಳ್ಳಾರಿ ಜಿಲ್ಲೆ ವಿಭಜನೆಯಾಗಿ ವಿಜಯನಗರ ಜಿಲ್ಲೆಯಾದರೆ 371 ಜೆ ಸೌಲಭ್ಯ ಸಿಗುವುದಿಲ್ಲ ಎಂಬುದು ತಪ್ಪು ಅಭಿಪ್ರಾಯ. ಹೊಸ ಜಿಲ್ಲೆಯ ಜನತೆಗೆ ಎಲ್ಲಾ ಸೌಲಭ್ಯಗಳು ಸಿಗುತ್ತವೆ ಎಂದು ಅವರು ತಿಳಿಸಿದರು.

ವಿಜಯನಗರ ಜಿಲ್ಲೆ ರಚನೆ ನಿರ್ಧಾರ ರಾಜ್ಯ ಸರ್ಕಾರದ್ದು. ನಾವು ಸರ್ಕಾರದ ನಿರ್ಣಯಗಳ ಬಗ್ಗೆ ಏನೂ ಹೇಳಲಿಕ್ಕೆ ಆಗಲ್ಲ, ತಡೆಯಲಿಕ್ಕೂ ಆಗಲ್ಲ, ಸ್ವಾಗತ ಮಾಡುತ್ತೇನೆ. ಜಿಲ್ಲೆ ರಚನೆ ವಿರುದ್ಧ ಬಳ್ಳಾರಿ ಬಂದ್ ವಿಚಾರ ಅವರವರ ವೈಯಕ್ತಿಕವಾಗಿದ್ದು, ವಿಜಯ ನಗರ ಜಿಲ್ಲೆಯಾದರೂ ಸಂತೋಷ, ಆಗದಿದ್ದರೂ ಸಂತೋಷ ಎಂದು ಅವರು ಹೇಳಿದರು.

ಹರಪನಹಳ್ಳಿ ಕ್ಷೇತ್ರದಲ್ಲಿ ವಿಧಾನಸಭಾ ಟಿಕೆಟ್ ಆಕಾಂಕ್ಷಿಗಳು ಜಾಸ್ತಿ ಇರುವುದರಿಂದ ಸ್ಪರ್ಧೆ ಜಾಸ್ತಿಯಾಗಿ, ಭಿನ್ನಮತ ಹೆಚ್ಚಿರುತ್ತದೆ. ನಾನು ಗಮನಿಸಿದ್ದೇನೆ, ಹೈಕಮಾಂಡ್ ಗೂ ವರದಿ ಮಾಡಿದ್ದೇವೆ. ನನಗೆ ಜವಾಬ್ದಾರಿ ವಹಿಸಿದರೆ ಖಂಡಿತಾ ಬಗೆಹರಿಸುತ್ತೇನೆ ಎಂದು ಅವರು ತಿಳಿಸಿದರು.

ಹರಪನಹಳ್ಳಿ ಕ್ಷೇತ್ರದಲ್ಲಿ ಮಾಜಿ ಶಾಸಕರೂ ಇಲ್ಲ, ಹಾಲಿ ಶಾಸಕರೂ ಇಲ್ಲ. ಆದ್ದರಿಂದ ಭಿನ್ನಮತ ಇದೆ ಎಂದರು. ರಾಜ್ಯದಲ್ಲಿ, ರಾಷ್ಟ್ರದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಪುನಶ್ಚೇತನವಾಗುತ್ತಿದೆ. ಕಾಂಗ್ರೆಸ್ ಯಾವತ್ತೂ ನಿರ್ಜೀವ ಆಗಲ್ಲ, ನಿರಂತರ ಇರುವ ಪಕ್ಷ ಎಂದರು. ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ನಾನಲ್ಲ ಎಂದು ಅವರು ಸ್ಪಷ್ಟ ಪಡಿಸಿದರು. ಗ್ರಾಮ ಪಂಚಾಯ್ತಿ ಚುನಾವಣೆಗಳು ಸಮಯಕ್ಕೆ ಸರಿಯಾಗಿ ನಡೆಯಬೇಕು ಎಂಬ ಉದ್ದೇಶದಿಂದ ಕೋರ್ಟ್ ಮೊರೆ ಹೋಗಿದ್ದು ಎಂದು ಹೇಳಿದರು.

ಪುರಸಭಾ ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಟಿ.ವೆಂಕಟೇಶ್, ಗೊಂಗಡಿ ನಾಗರಾಜ್, ಉದ್ದಾರ ಗಣೇಶ್, ಮುಖಂಡರಾದ ಚಿಕ್ಕೇರಿ ಬಸಪ್ಪ, ಟಿ.ಎಚ್.ಎಂ. ಮಂಜುನಾಥ್, ದುಗ್ಗಾವತ್ತಿ ಮಂಜುನಾಥ್, ನವರಂಗ್, ನಿಶಾದ್ ಮತ್ತು ಇತರರು ಹಾಜರಿದ್ದರು.

## ಅಕ್ರಮ ಹಣ : ಕಾಕ್ಸ್ ಅಂಡ್ ಕಿಂಗ್ಸ್‌ನ ಕೆರ್ಕರ್ ಬಂಧನ

**(1ನೇ ಪುಟದಿಂದ)** ಕಂಪನಿಯಾದ ಕಾಕ್ಸ್ ಅಂಡ್ ಕಿಂಗ್ಸ್‌ನ ಹಲವಾರು ಮಾಜಿ ಕಾರ್ಯಕಾರಿಗಳ ನಿವಾಸಗಳ ಮೇಲೆ ಜೂನ್ ತಿಂಗಳಲ್ಲಿ ಜಾರಿ ನಿರ್ದೇಶನಾಲಯ ದಾಳಿ ನಡೆಸಿತ್ತು. ಕಳೆದ ಅಕ್ಟೋಬರ್‌ನಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಹಣಕಾಸು ಮುಖ್ಯಾಧಿಕಾರಿ ಅನಿಲ್ ಖಂಡೇಲ್ವಾಲ್ ಹಾಗೂ ಆಂತರಿಕ ಲೆಕ್ಕ ಪರಿಶೋಧಕ ನರೇಶ್ ಜೈನ್ ಅವರನ್ನು ಬಂಧಿಸಲಾಗಿತ್ತು.

ಕಂಪನಿ ಪ್ರಸಕ್ತ ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆಯಲ್ಲಿದೆ.

ಖಂಡೇಲ್ವಾಲ್ ಹಾಗೂ ಜೈನ್ ಸೇರಿ ಕೊಂಡು ಕಾಕ್ಸ್ ಅಂಡ್ ಕಿಂಗ್ಸ್‌ನ ಹಣವನ್ನು ದುರ್ಬಳಕೆ ಮಾಡಿಕೊಂಡು ಹಲವಾರು ಸ್ಥಿರಾಸ್ತಿ ಖರೀದಿಸಿದ್ದಾರೆ ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ.

2015-2019ರ ಅವಧಿಯಲ್ಲಿ 3,908 ಕೋಟಿ ರೂ.ಗಳ ವಹಿವಾಟನ್ನು 15 ಅಸ್ತಿತ್ವದಲ್ಲಿ ಇರದೇ ಇರುವ ಗ್ರಾಹಕರ ಜೊತೆ ನಡೆಸಲಾಗಿರುವುದಾಗಿ ದಾಖಲೆ ಸೃಷ್ಟಿಸಲಾಗಿತ್ತು ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಯೆಸ್ ಬ್ಯಾಂಕ್ ಸಹ ಪ್ರವರ್ತಕ ರಾಣಾ ಕಪೂರ್ ಹಾಗೂ ಡಿ.ಹೆಚ್.ಎಫ್.ಎಲ್. ಪ್ರವರ್ತಕರಾದ ಕಪಿಲ್ ವಾಧವಾನ್ ಹಾಗೂ ಧೀರಜ್ ವಾಧವಾನ್ ಅವರನ್ನು ಈ ವರ್ಷದ ಆರಂಭದಲ್ಲಿ ಬಂಧಿಸಲಾಗಿತ್ತು.


**ಸೈಟುಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ**
ವಿನಾಯಕ ಬಡಾವಣೆಯಲ್ಲಿ 30x36 ಉತ್ತರ, 40x50 ದಕ್ಷಿಣ, ಬನಶಂಕರಿ ಬಡಾವಣೆಯಲ್ಲಿ 30x40 ಉತ್ತರ, 40x60 ಪಶ್ಚಿಮ, ಎಸ್.ಎಸ್. ಬಡಾವಣೆಯ ಅಪಾರ್ಟ್ ಮೆಂಟ್ ನಲ್ಲಿ 2 ಬೆಡ್‌ರೂಂ ಮನೆ ಲೀಸ್‌ಗೆ ಇದೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715
ಶಾಮನೂರು ನಾಗರಾಜ್ 98448 83303

**Basic - 1500/- DTP-1500/- Photoshop-3500/-**
**Door To Door Coaching**
97426 10385

**Spar Sunshine,**
ಜರ್ಮನ್ ತಂತ್ರಜ್ಞಾನದ ಸೌರ ಮೇಲಚ್ಛಾವಣಿಯನ್ನು ಮಾಡಿಕೊಡುತ್ತೇವೆ
1.ಶಾಶ್ವತವಾಗಿ ನಿಮ್ಮ ವಿದ್ಯುತ್ ಬಿಲ್ಲನ್ನು ಉಳಿಸಿ
2. ಹೆಚ್ಚುವರಿ ವಿದ್ಯುತ್ ನಿಂದ ಲಾಭ ಗಳಿಸಿ.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
6360591025

**Simple vaastu**
ಸಿಂಪಲ್ ವಾಸ್ತು
98444 88838

**ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ**
ಸಂಬಳ : 9,000/-
ನಂದಿ ಟೈರ್ ಪ್ಲಾನೆಟ್
ಮೊ: 95381 87385, 93218 78281
ಟೆ: 08192-261003

**Vijay Para Medical College**
Golden Public School Near, DCM Town ship Davanagere.
DMLT- (Lab Technician)
DHT- Health Inspector
DMIT - X-ray Technician
DOT- Operation Theatre
Contact: 77601 55550

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
150 ಜನ ಅನುಭವವುಳ್ಳ ಟೈಲರ್ಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ.
ಶಾಕಿರ ಗಾರ್ಮೆಂಟ್ಸ್
Plot No. 57, Karuru Industrial Area, D.C. Office Main Road, Davamagere.
97434 46516 / 70198 38653,

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**WANTED**
ಬ್ಯೂಟಿಷಿಯನ್ಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ.
ಶಾಕಿರ ಬ್ಯೂಟಿ ಪಾರ್ಲರ್
#741, ಮೋದಿ ಕಾಂಪೌಂಡ್ ಎದುರು, ಪಿ.ಜೆ. ಬಡಾವಣೆ, ದಾವಣಗೆರೆ.
93420 19013

**ಸೈಟ್ ಮತ್ತು ಅಪಾರ್ಟ್‌ಮೆಂಟ್ ಬಾಡಿಗೆಗೆ, ಮಾರಾಟಕ್ಕೆ ಇದೆ**
ಎಸ್.ಎಸ್. ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ಸಿದ್ದವೀರಪ್ಪ ಬಡಾವಣೆ, KHB ಕಾಲೋನಿ, ಜೆ. ಹೆಚ್. ಪಟೇಲ್ ನಗರ, ಬನಶಂಕರಿ ಬಡಾವಣೆ, ಕಮರ್ಷಿಯಲ್ ಸೈಟ್ ಬಾಲಾಜಿ ಲೇಔಟ್ 30×50, 30×48, 20×30, 50×50, 50×70
94481-85946

**House For Rent Long Term & Short Term Available**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಬೇಕಾಗಿದ್ದಾರೆ**
ಡಿಲೆವರಿ ಬಾಯ್ಸ್ (ಎಸ್‌ಎಸ್‌ಎಲ್ ಸಿ)
ಆಪೇ ಆಟೋ ಡ್ರೈವರ್ (ಲೈಸನ್ಸ್ ಉಳ್ಳವರು)
ಎ.ಕೆ.ಟ್ರೇಡರ್ಸ್
'ಆಶೀರ್ವಾದ್', ಬಾಪೂಜಿ ಆಸ್ಪತ್ರೆ ರಸ್ತೆ, ದಾವಣಗೆರೆ-577002

**ಬೇಕಾಗಿದ್ದಾರೆ**
ಮೆಕ್ಯಾನಿಕ್ ಐಟಿಐ/ ಡೀಸೆಲ್ ಮೆಕ್ಯಾನಿಕ್ 1-2 ವರ್ಷ ಅನುಭವ
ಹೆಲ್ಪರ್ ಮೆಕ್ಯಾನಿಕ್ ಐಟಿಐ/ ಡೀಸೆಲ್ ಮೆಕ್ಯಾನಿಕ್/ ಫಿಟ್ಟರ್ ಎಸ್‌ಎಸ್‌ಎಲ್‌ಸಿ
ವಿಳಾಸ: ವಿಜಯ ಆಟೋ ಸೇಲ್ಸ್ ಮತ್ತು ಸರ್ವೀಸ್
Dealer For Eicher Trucks & Buses
ಪಿ.ಬಿ.ರಸ್ತೆ, ದಾವಣಗೆರೆ.
ಮೊ: 93801 17903

**Wanted**
Delivery Boys (SSLC)
Ape Auto Driver with valid License
A.K. TRADERS
Ashirwad, Bapuji Hospital Road, Davangere 577004

**ಹೆಚ್.ಕೆ.ವಿ. ವಯೋವೃದ್ದರ ಆರೈಕೆ ಕೇಂದ್ರ**
ವಯೋವೃದ್ದರು, ಕೈ ಕಾಲು ಸ್ವಾಧೀನವಿಲ್ಲದವರನ್ನು, ಬೆಡ್ ರಿಡನ್, ಪೇಷೆಂಟ್‌ಗಳನ್ನು ನಮ್ಮಲ್ಲಿ ಇರಿಸಿಕೊಂಡು ನೋಡಿಕೊಳ್ಳುತ್ತೇವೆ. ದಾವಣಗೆರೆ.
89711 92936
76250 15036


## ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ' ವಿಷಯ ಕುರಿತಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಎಸ್.ಎಂ. ಗೌರಮ್ಮ ಮಾತನಾಡುವರು.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAx-ce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ದಿನಗಳಲ್ಲಿ ಒಳ್ಳೆಯ ನಿರ್ಧಾರ

**(1ನೇ ಪುಟದಿಂದ)** ಅಂತ್ಯಗೊಳಿಸಿದ್ದರು. ಅದರಂತೆ ಇಂದು ಭೇಟಿ ಮಾಡಿದಾಗ ಮುಖ್ಯಮಂತ್ರಿಗಳು ಕೆಲವೇ ದಿನಗಳಲ್ಲಿ ಒಳ್ಳೆಯ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ ಎಂದು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಈ ಸಂದರ್ಭದಲ್ಲಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ರಾಜ್ಯ ಯುವ ಘಟಕದ ಅಧ್ಯಕ್ಷ ಸೋಮಶೇಖರ್ ಹಲ್ಯಾಳ್ ಉಪಸ್ಥಿತರಿದ್ದರು.

## ಜೈಲಿನಿಂದ ಸಚಿವ ಸ್ಥಾನದ ಆಮಿಷ

**(1ನೇ ಪುಟದಿಂದ)** ರವಾನಿಸಲಾಗಿತ್ತು.

ಈ ನಡುವೆ ಹೇಳಿಕೆ ನೀಡಿರುವ ಬಿಹಾರದ ಮಾಜಿ ಮುಖ್ಯಮಂತ್ರಿ ಹಾಗೂ ಹಿಂದೂಸ್ತಾನ್ ಅವಾಮ್ ಮೋರ್ಚಾದ ಅಧ್ಯಕ್ಷ ಜಿತನ್ ರಾಮ್ ಮಾಂಝಿ, ಲಾಲು ಹಲವು ಬಾರಿ ಜೈಲಿನಿಂದಲೇ ತಮ್ಮ ಹಲವಾರು ನಿಕಟವರ್ತಿಗಳಿಗೆ ಕರೆ ಮಾಡಿರುವುದಾಗಿ ಹೇಳಿದ್ದಾರೆ.

## ಹರಿಹರ ಪೌರಾಯುಕ್ತರಾಗಿ ಉದಯಕುಮಾರ್ ತಳವಾರ



ಹರಿಹರ, ನ.26- ನಗರಸಭೆಯ ಪೌರಾಯುಕ್ತರಾಗಿ ಉದಯ ಕುಮಾರ್ ತಳವಾರ ಅವರು ಇಂದು ಸಂಜೆ ನಗರಸಭೆಯ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು. ಶ್ರೀಮತಿ ಎಸ್. ಲಕ್ಷ್ಮಿ ಅವರು ವರ್ಗಾವಣೆಯಾಗಿದ್ದು, ಅವರ ಸ್ಥಾನಕ್ಕೆ ಉದಯಕುಮಾರ್ ತಳವಾರ ಆಗಮಿಸಿದ್ದಾರೆ.

ಈ ವೇಳೆ ಮಾತನಾಡಿದ ಉದಯ ಕುಮಾರ್, ತಾವು ಚಾಮರಾಜನಗರ, ಬಿಬಿಎಂಪಿ ಸಹಾಯಕ ಅಭಿಯಂತರರಾಗಿ, ಬೆಳಗಾವಿ ಮಹಾನಗರ ಪಾಲಿಕೆ ಎಇಇಯಾಗಿ ಹಾಗೂ ಹರಿಹರ ನಗರದಲ್ಲೂ ಆರು ತಿಂಗಳ ಸೇವೆಯನ್ನು ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ಎಇಇ ಬಿರಾದಾರ, ಇಂಜಿನಿಯರ್ ಮಹೇಶ್ ಕೊಡಬಾಳು, ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್, ದಾದಾ ಖಲಂದರ್, ಎಂ. ಎಸ್. ಬಾಬುಲಾಲ್, ಅಬ್ದುಲ್ ಅಲಿಂ, ನಗರಸಭೆ ಸಿಬ್ಬಂದಿಗಳಾದ ತಿಪ್ಪೇಸ್ವಾಮಿ, ಅಣ್ಣಪ್ಪ, ಮಂಜುನಾಥ್, ಪ್ರಕಾಶ್, ಮುಖಂಡರಾದ ಮಾರುತಿ ಬೇಡರ್, ಕೆ.ಬಿ ಮಂಜುನಾಥ್ ಕಳ್ಳೇರ್, ಎಂ.ಹೆಚ್. ಬಸವರಾಜ್ ಮೆಣಸಿನಾಳ, ಬಾಷಾ, ಜಿ. ನಂಜಪ್ಪ ಮತ್ತು ಇತರರು ಹಾಜರಿದ್ದರು.

# ರೈತ-ಕಾರ್ಮಿಕ ವಿರೋಧಿ ನೀತಿಗೆ ಧಿಕ್ಕಾರ




**(1ನೇ ಪುಟದಿಂದ)** ಬೆನ್ನೆಲುಬು ಮುರಿಯುತ್ತಿದೆ. ಸಂವಿಧಾನದತ್ತವಾಗಿ ನೀಡಲಾದ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ. ಎಲ್.ಐ.ಸಿ., ರೈಲ್ವೆ, ಬ್ಯಾಂಕ್ ಮುಂತಾದವುಗಳ ಖಾಸಗೀಕರಣದಿಂದ ಜನರು ಶ್ರಮದ ಕರ್ತವ್ಯ ನಿರ್ವಹಿಸಲೂ ಸಾಧ್ಯವಾಗದ ಪರಿಸ್ಥಿತಿ ಉಂಟಾಗಿದೆ ಎಂದರು.

ಬಿಜೆಪಿ ಹಿಂದಿನಿಂದಲೂ ಸುಳ್ಳು ಹೇಳುತ್ತಲೇ ಬರುತ್ತಿದೆ. ಆರ್.ಎಸ್.ಎಸ್. ಸಂಘಟನೆ ತ್ರಿವರ್ಣ ಧ್ವಜವನ್ನೇ ನಾಗಪುರದಲ್ಲಿ ಹಾರಿಸುವುದಿಲ್ಲ. ಇಂತಹ ಕೋಮುವಾದಿ - ಜಾತಿವಾದಿಗಳಿಗೆ ಜನರ ಕಷ್ಟ ಗೊತ್ತಾಗುವುದಿಲ್ಲ ಎಂದು ಕಿಡಿ ಕಾರಿದರು.

ಬ್ಯಾಂಕಿಂಗ್ ವಲಯವನ್ನು ಕಾರ್ಪೊರೇಟ್‌ಗಳಿಗೆ ಕೊಡಲು ಹೊರಟಿದ್ದಾರೆ. ಹೀಗಾದರೆ ಇಡೀ ಬ್ಯಾಂಕಿಂಗ್ ವಲಯ 70 ವರ್ಷಗಳ ಹಿಂದೆ ಹೋಗುವ ಪರಿಸ್ಥಿತಿ ಎದುರಾಗುತ್ತದೆ ಎಂದವರು ಎಚ್ಚರಿಕೆ ನೀಡಿದರು.

ರೈತರು ಹಾಗೂ ಕಾರ್ಮಿಕರು ಒಂದಾದರೆ ಮಾತ್ರ ಸಾರ್ವಜನಿಕ ವಲಯದ ಕಂಪನಿಗಳನ್ನು ಉಳಿಸಲು ಸಾಧ್ಯವಾಗಲಿದೆ. ಇಲ್ಲದಿದ್ದರೆ ಬಿಜೆಪಿ ಸರ್ಕಾರ ಎಲ್ಲವನ್ನೂ ಕಾರ್ಪೊರೇಟ್‌ಗಳ ಪಾದಗಳಿಗೆ ಅರ್ಪಿಸಲಿದೆ ಎಂದು ರಾಮಚಂದ್ರಪ್ಪ ಹೇಳಿದರು.

ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯರಿ ಮಾತನಾಡಿ, ಕೇಂದ್ರ ಸರ್ಕಾರ ಬಂಡವಾಳಶಾಹಿಗಳ ಪರ ಕಾನೂನು ರೂಪಿಸಿ ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರುತ್ತಿದೆ. ಬ್ಯಾಂಕ್‌ಗಳಲ್ಲಿ ಸಾಲ ಮಾಡಿ ವಂಚಿಸಿರುವ ಉದ್ಯಮಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಕಾರ್ಮಿಕ ಮುಖಂಡರಾದ ಕೆ.ಹೆಚ್. ಆನಂದರಾಜ್, ಕೈದಾಳೆ ಮಂಜುನಾಥ್, ಜುಬೀನಾ ಖಾನಂ, ದ್ರಾಕ್ಷಾಯಣಮ್ಮ, ಆವರಗೆರೆ ಚಂದ್ರು, ಆವರಗೆರೆ ವಾಸು, ಎಸ್. ನಾಗರಾಜ್, ರಹಮತ್‌ವುಲ್ಲಾ, ಕುಕ್ಕುವಾಡ ಮಂಜುನಾಥ್, ರಾಜೇಂದ್ರ ಬಂಗೇರ, ಪಿ.ಎಸ್. ನಾಗರಾಜ್, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

## ವೇತನ - ಪಿಂಚಣಿ ಕೊಡಿ

**(1ನೇ ಪುಟದಿಂದ)** ಕೆ.ಜಿ. ಉಚಿತ ಪಡಿತರ, ಆಶಾ ಮತ್ತಿತರೆ ಕಾರ್ಮಿಕರಿಗೆ ಮಾಸಿಕ 21,000 ರೂ. ವೇತನ, ಸರ್ಕಾರಿ ವಲಯದ ನೌಕರರ ಅಕಾಲಿಕ ನಿವೃತ್ತಿ ಸುತ್ತೋಲೆ ವಾಪಸ್ ಹಾಗೂ ಸರ್ವರಿಗೂ ಪಿಂಚಣಿ ನೀಡಬೇಕು ಎಂಬುದು ಮುಷ್ಕರ ನಡೆಸಿದವರ ಬೇಡಿಕೆಗಳಾಗಿವೆ.

# ವೀರಶೈವ ಸಭಾದ ಕಟ್ಟಡಕ್ಕೆ ಶೀಘ್ರ ಶಂಕುಸ್ಥಾಪನೆ

## ಅಖಿಲ ಭಾರತ ವೀರಶೈವ ಮಹಾಸಭಾ ನಗರ ಮಹಿಳಾ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಎಸ್ಸೆಸ್





ದಾವಣಗೆರೆ, ನ.26- ನಗರದ ಶಾಮನೂರು ರಸ್ತೆಯ ಬಿಐಇಟಿ ಕಾಲೇಜಿನ ಎದುರು ಇರುವ ಅಖಿಲ ಭಾರತ ವೀರಶೈವ ಮಹಾಸಭಾದ 10 ಸಾವಿರ ಚದುರಡಿ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಾಣದ ಕಾರ್ಯ ಶೀಘ್ರವೇ ಆರಂಭವಾಗಲಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ತಿಳಿಸಿದ್ದಾರೆ.

ನಗರದ ಶ್ರೀ ಶ್ರೀಶೈಲ ಮಠದ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಅಖಿಲ ಭಾರತ ವೀರಶೈವ ಮಹಾಸಭಾ ನಗರ ಮಹಿಳಾ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ವೀರಶೈವರ ಸಂಘಟನೆ ಇಂದು ಬಲಗೊಳ್ಳುತ್ತಿದೆ. ವೀರಶೈವರೂ, ಲಿಂಗಾಯತರೂ ಬೇರೆ ಬೇರೆ ಅಲ್ಲ, ಎರಡೂ ಒಂದೇ. ಆದರೆ, ಕೆಲವರು ವೀರಶೈವರು, ಲಿಂಗಾಯತರು ಬೇರೆ ಬೇರೆ ಎಂದು ಸಮಾಜದಲ್ಲಿ ಗೊಂದಲ ಮೂಡಿಸುತ್ತಿದ್ದಾರೆಂದು ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವೀರಶೈವ ಮಹಾಸಭಾ ಉಪಾಧ್ಯಕ್ಷ ಅಥಣಿ ವೀರಣ್ಣ ಅವರು ಮಾತನಾಡಿ, ಮಹಿಳೆಯರು ಸಂಘಟಿತರಾಗಿ ವೀರಶೈವ ಮಹಾಸಭಾದ ಕಾರ್ಯ ಚಟುವಟಿಕೆಗಳನ್ನು ಉತ್ಸಾಹದಿಂದ ಮಾಡಬೇಕೆಂದು ಕರೆ ನೀಡಿದರು.

ಮತ್ತೋರ್ವ ಅತಿಥಿಯಾಗಿ ಆಗಮಿಸಿದ್ದ ಮಹಾಪೌರ ಬಿ.ಜಿ.ಅಜಯ್‌ಕುಮಾರ್ ಅವರು, ವೀರಶೈವ ಮಹಾ ಸಭಾದ ಕಾರ್ಯಕ್ರಮಗಳನ್ನು ನಡೆಸಲು ಕಚೇರಿಯನ್ನು ತೆರೆಯಲು ಮಳಿಗೆಯನ್ನು ಬಾಡಿಗೆ ಪಡೆದರೆ ತಾವು ಒಂದು ವರ್ಷದ ಬಾಡಿಗೆಯನ್ನು ಕೊಡುವುದಾಗಿ ಭರವಸೆ ನೀಡಿದರು.

ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಮಾತನಾಡಿ, ವೀರಶೈವ ಲಿಂಗಾಯತರು ಅಭಿವೃದ್ಧಿ ನಿಗಮ ಸ್ಥಾಪನೆಯಾಗಿರುವುದರಿಂದ ಇದರ ಸದುಪಯೋಗವನ್ನು ಸಮಾಜದವರು ಪಡೆದು, ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಸಾನ್ನಿಧ್ಯ ವಹಿಸಿದ್ದ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಮಹಿಳೆಯರಲ್ಲಿ ಧಾರ್ಮಿಕ ಮನೋಭಾವ ಹೆಚ್ಚಾಗಿದ್ದು, ತಮ್ಮ ಮಕ್ಕಳಿಗೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳಬೇಕೆಂದು ಕರೆ ನೀಡಿದರು. ಮಕ್ಕಳಲ್ಲಿ ಧಾರ್ಮಿಕ ಆಚಾರ-ವಿಚಾರಗಳನ್ನು ಬೆಳೆಸಿ, ಅವರಿಗೆ ಉತ್ತಮ ಸಂಸ್ಕಾರ ನೀಡಬೇಕೆಂದು ತಿಳಿಸಿದರು.

ವೀರಶೈವ ಮಹಾಸಭಾದ ನಗರ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಪುಷ್ಪ ವಾಲಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್, ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರಾದ ಶ್ರೀಮತಿ ವಿನುತ ರವಿ, ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ಉಮಾ ರಮೇಶ್, ಜಿ.ಪಂ. ಅಧ್ಯಕ್ಷರಾದ ಶ್ರೀಮತಿ ದೀಪಾ ಜಗದೀಶ್, ಮಹಾನಗರ ಪಾಲಿಕೆ ಸದಸ್ಯರಾದ ಎಸ್.ಟಿ.ವೀರೇಶ್, ಶ್ರೀಮತಿ ಗೌರಮ್ಮ ಗಿರೀಶ್, ಸೋಗಿ ಆರ್.ಶಾಂತ ಕುಮಾರ್, ವೀಣಾ ನಂಜಣ್ಣ, ಶಿವನಗೌಡ ಟಿ. ಪಾಟೀಲ್, ಜಿ.ಎಸ್.ಮಂಜುನಾಥ್ ಗಡಿಗುಡಾಳ್, ಶ್ರೀಶೈಲ ಮಠದ ಎಂ.ಬನ್ನಯ್ಯ ಸ್ವಾಮಿ, ಕೆ.ಎಂ.ಪರಮೇಶ್ವರಯ್ಯ ಮತ್ತಿತರರು ಉಪಸ್ಥಿತರಿದ್ದರು.

ಮಂಜುಳಾ ಇಟಗಿ ಪ್ರಾರ್ಥಿಸಿದರು. ರೂಪಾ ಶಿವಕುಮಾರ್ ಸ್ವಾಗತಿಸಿದರು. ಮಂಗಳಾ ಕರಿಬಸಪ್ಪ ನಿರೂಪಿಸಿದರು.

## 29ರಂದು ನಗರದಲ್ಲಿ ಜಂಗಮ ಸಮಾಜ ಬಾಂಧವರ ಸಭೆ

ದಾವಣಗೆರೆ,ನ.26-ಅಖಿಲ ಭಾರತ ಜಂಗಮ ಮಹಾಸಭಾದಿಂದ ಜಂಗಮ ಸಮಾಜ ಬಾಂಧವರ ಸಭೆಯನ್ನು ಇದೇ ದಿನಾಂಕ 29ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ಕರೆಯಲಾಗಿದೆ.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಬೆಂಗಳೂರಿನ ಕೊಳದ ಮಠದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಬಳ್ಳಾರಿಯ ಕಮ್ಮರ ಚೇಡ ಮಠದ ಶ್ರೀ ಕಲ್ಯಾಣ ಸ್ವಾಮೀಜಿ, ತುಮಕೂರಿನ ಕುಪ್ಪೂರು ಗದ್ದಿಗೆ ಸಂಸ್ಥಾನ ಮಠದ ಶ್ರೀ ಯತೀಶ್ವರ ಶಿವಾಚಾರ್ಯ ಸ್ವಾಮೀಜಿ, ಜಗಳೂರು - ಮುಷ್ಟೂರಿನ ಓಂಕಾರೇಶ್ವರ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರೂ ಆಗಿರುವ ಹಿರಿಯ ವಕೀಲ ಬಿ.ಡಿ. ಹಿರೇಮಠ ಅಧ್ಯಕ್ಷತೆ ವಹಿಸಲಿದ್ದಾರೆ.


**REQUIRED / ಬೇಕಾಗಿದ್ದಾರೆ**

✦ Manager - 2 No.s ✦ Receptionist - 3 No.s
✦ Nursing Staff / ನರ್ಸಿಂಗ್ ಸ್ಟಾಫ್ - 15 No.s
✦ OT Nursing - 5 No.s
✦ ICU Staff - 5 No.s ✦ X-Ray Tech - 2 No.
✦ House Keeping / ಆಯಾ - 10 No.s

ಉಚಿತ ವಸತಿ ವ್ಯವಸ್ಥೆ ಇರುತ್ತದೆ


ಸನ್‌ಶೈನ್ ಪುರಂತರ್ ಹಾಸ್ಪಿಟಲ್ SUNSHINE PURANTAR HOSPITAL

Contact : 94489 55667, 88846 34545


## ಕರ್ನಾಟಕ ಕಲ್ಯಾಣ ಪಾದಯಾತ್ರೆಗೆ ಕಾರಿಗನೂರಿನಲ್ಲಿ ಇಂದು ಚಾಲನೆ

ಜೆ.ಹೆಚ್. ಪಟೇಲ್ ಫೌಂಡೇಶನ್ ವತಿಯಿಂದ ಮಹಿಮ ಜೆ. ಪಟೇಲ್ ನೇತೃತ್ವದಲ್ಲಿ ಕರ್ನಾಟಕ ಕಲ್ಯಾಣ ಪಾದಯಾತ್ರೆಯು ಕಾರಿಗನೂರಿನ ಜೆ.ಹೆಚ್.ಪಟೇಲ್ ಸಮಾಧಿಯಿಂದ ಇಂದು ಪ್ರಾರಂಭಗೊಳ್ಳಲಿದೆ.

## ನಗರದಲ್ಲಿ ಇಂದು ಶ್ರೀ ನಿಮಿಷಾಂಬ ದೇವಿ ಪ್ರತಿಷ್ಠಾಪನಾ ಉತ್ಸವ



ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸಮಾಜದ ವತಿಯಿಂದ ಶ್ರೀ ನಿಮಿಷಾಂಬ ದೇವಿಯ 62ನೇ ಪ್ರತಿಷ್ಠಾಪನಾ ಮಹೋತ್ಸವ ಇಂದು ನಡೆಯಲಿದೆ. ಈ ಪ್ರಯುಕ್ತ ಬೆಳಗಿನ ಜಾವ ದೇವಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ ನಂತರ ಬೆಳಿಗ್ಗೆ 7.30 ರಿಂದ 8 ಗಂಟೆಗೆ ಗಂಗಾ ಪೂಜೆ ನಂತರ ಗಣಪತಿ ಪೂಜೆ, ಗಣಹೋಮ, ನವಗ್ರಹ ಹೋಮ, ಶ್ರೀ ನಿಮಿಷಾಂಬದೇವಿ ಕಲಾಹೋಮ, ಬಲಿಹರಣ, ಪೂರ್ಣಾಹುತಿ, ಶ್ರೀ ನಿಮಿಷಾಂಬ ದೇವಿ ಪಲ್ಲಕ್ಕಿ ಉತ್ಸವ ನಡೆಯಲಿದೆ.


**ನಂದಿನಿ ಮಿಲ್ಕ್ ಪಾರ್ಲರ್ ಉದ್ಘಾಟನಾ ಸಮಾರಂಭ**

ದಿನಾಂಕ 27-11-2020ನೇ ಶುಕ್ರವಾರ, ಸಮಯ : ಬೆಳಿಗ್ಗೆ 11 ಗಂಟೆಗೆ
ಸ್ಥಳ : ವಿದ್ಯಾನಗರ (ಶ್ರೀ ಆಂಜನೇಯ ದೇವಸ್ಥಾನದ ಎದುರು), ದಾವಣಗೆರೆ.
ಮೊ. : 9538009518

ಮುಖ್ಯ ಅತಿಥಿಗಳು :

- ✦ **ಎಸ್.ಎ. ರವೀಂದ್ರನಾಥ್,** ಮಾಜಿ ಸಚಿವರು, ಹಾಲಿ ಶಾಸಕರು, ದಾವಣಗೆರೆ ಉತ್ತರ
- ✦ **ಅಣಬೇರು ಜೀವನಮೂರ್ತಿ,** ಅಧ್ಯಕ್ಷರು, ಕರ್ನಾಟಕ ರಾಜ್ಯ ಬಯಲು ಸೀಮೆ ಅಭಿವೃದ್ಧಿ ಮಂಡಳಿ
- ✦ **ಶ್ರೀಮತಿ ಗೀತಾ ದಿಳ್ಳೆಪ್ಪ,** ಸದಸ್ಯರು, ದಾವಣಗೆರೆ ಮಹಾನಗರ ಪಾಲಿಕೆ
- ✦ **ಬಸಪ್ಪ,** ಉಪಾಧ್ಯಕ್ಷರು, ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟ
- ✦ **ಜಗದೀಶಪ್ಪ ಬಣಕಾರ್** ಮಾಜಿ ಅಧ್ಯಕ್ಷರು ಹಾಗೂ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟ
- ✦ **ಬಸವರಾಜಪ್ಪ** ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟ
- ✦ **ಸೋಮಶೇಖರ್** ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟ
- ✦ **ಡಾ|| ಬಸವರಾಜ್** ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟ
- ✦ **ಡಾ|| ಎಸ್.ಎಂ. ಮೂರ್ತಿ** ವ್ಯವಸ್ಥಾಪಕರು ಮಾರುಕಟ್ಟೆ, ಶಿವಮೊಗ್ಗ, ದಾವಣಗೆರೆ & ಚಿತ್ರದುರ್ಗ ಹಾಲು ಒಕ್ಕೂಟ
- ✦ **ಸುರೇಶ್ ಹುಳ್ಳಿ** ಉಪವ್ಯವಸ್ಥಾಪಕರು, ಆಡಳಿತ ಜಿಲ್ಲಾ ಮಾರುಕಟ್ಟೆ ಉಸ್ತುವಾರಿ, ದಾವಣಗೆರೆ.
- ✦ **ಕೆ.ಆರ್. ವಸಂತಕುಮಾರ್,** ಮಾಜಿ ಮೇಯರ್, ದಾವಣಗೆರೆ
- ✦ **ಎಸ್.ಟಿ. ಶಾಂತಗಂಗಾಧರ್,** ಸಾಹಿತಿಗಳು, ರಾಜ್ಯೋತ್ಸವ ಪ್ರಶಸ್ತಿ ವಿಜೇತರು.

ಸರ್ವರಿಗೂ ಆದರದ ಸ್ವಾಗತ... ಸುಸ್ವಾಗತ...

- ✦ **ಪಾಲಾಕ್ಷಪ್ಪ,** ಮಾಜಿ ಕನ್ವೀನರ್, ಸಿದ್ದೇಶ್ವರ ದೇವಸ್ಥಾನ, ಸೂಳೆಕೆರೆ, ಹೊಸಳ್ಳಿ.
- ✦ **ಹಾಲೇಶ್ ಜಿ.ಬಿ.** ಎಸ್.ಡಿ.ಎ., ಶಿಕ್ಷಣ ಇಲಾಖೆ, ಇಟ್ಟಿಗೆ.
- ✦ **ಶಿವಮೂರ್ತಿ ಡಿ.ಸಿ.** ಎಲ್‌ಐಸಿ ಛೇರ್‌ಮನ್ ಕ್ಲಬ್‌ನ ಸದಸ್ಯರು.


## ಹರಿಹರದಲ್ಲಿಂದು ಧನ್ವಂತರಿ ಯಾಗ

ಶ್ರೀ ತ್ರಿದಂಡಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನಜಿಯ್ಯರ್ ಸ್ವಾಮಿಗಳಿಂದ ತುಂಗಭದ್ರಾ ಪುಷ್ಕರ ಲೋಕ ಕಲ್ಯಾಣಾರ್ಥ ಕೋವಿಡ್ 19 (ಕೊರೊನಾ ಸೋಂಕು) ನಿವಾರಣೆಗಾಗಿ ತುಂಗಭದ್ರಾ ನದಿ ದಡದಲ್ಲಿರುವ ಶ್ರೀ ರಾಘ ವೇಂದ್ರ ಸ್ವಾಮಿಗಳ ಮಠದಲ್ಲಿ ಹಮ್ಮಿಕೊಂಡಿರುವ ಬ್ರಹ್ಮಯಜ್ಞ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 8 ಕ್ಕೆ ಗೋ ಪೂಜೆ, ಅರ್ಚನೆ, ಸೇವಾಕಾಲ, ವೇದ ಪಾರಾಯಣ ನಡೆಯುವುದು.

## ಬಯಲು ಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಜೀವನಮೂರ್ತಿ

ದಾವಣಗೆರೆ ತಾಲ್ಲೂಕಿನ ಅಣಬೇರು ಗ್ರಾಮದ ಬಿಜೆಪಿ ಮುಖಂಡ ಇ.ಜೀವನಮೂರ್ತಿ ಅವರು ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಚಿತ್ರದುರ್ಗದ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಕಛೇರಿಯಲ್ಲಿ ಜೀವನಮೂರ್ತಿ ಅವರು ಇಂದು ಅಧಿಕಾರ ಸ್ವೀಕರಿಸಲಿದ್ದಾರೆ. ಅಭಿಮಾನಿಗಳು ಈ ಸಂದರ್ಭದಲ್ಲಿ ಹಾಜರಿದ್ದು, ಶುಭ ಹಾರೈಸುವಂತೆ ಮಾಯಕೊಂಡ ವಿಧಾನ ಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಶ್ಯಾಗಲೆ ದೇವೇಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಕರಿಲಕ್ಕೇನಹಳ್ಳಿ ಓಂಕಾರಪ್ಪ, ಹೆಬ್ಬಾಳು ಮಹೇಂದ್ರ, ಹಿಂಡಸಕಟ್ಟೆ ಮಹಾಬಲೇಶ್ ಕೋರಿದ್ದಾರೆ.

## ದಾವಣಗೆರೆ ವಿವಿ ಕನ್ನಡ ಅಧ್ಯಯನ ವಿಭಾಗಕ್ಕೆ ಚಿಮು ನಾಮಕರಣ

ದಾವಣಗೆರೆ ವಿವಿಯ ಕನ್ನಡ ಅಧ್ಯಯನ ವಿಭಾ ಗಕ್ಕೆ ಡಾ.ಎಂ. ಚಿದಾನಂದ ಮೂರ್ತಿ ಅವರ ಹೆಸರನ್ನು ನಾಮಕರಣ ಮಾಡುವ ಸಮಾರಂಭವು ಇಂದು ಬೆಳಿಗ್ಗೆ 11.30 ಕ್ಕೆ ಎಂ.ಬಿ.ಎ. ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಹಂಪಿಯ ಕನ್ನಡ ವಿವಿ ಕುಲಪತಿ ಪ್ರೊ. ಸ.ಚಿ. ರಮೇಶ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಕರ್ನಾಟಕ ವಿ.ವಿ.ಯ ವಿಶ್ರಾಂತ ಪ್ರಾಧ್ಯಾಪಕ ಡಾ.ಜೆ.ಎಂ.ನಾಗಯ್ಯ ಉಪನ್ಯಾಸ ನೀಡುವರು. ಪ್ರೊ.ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು.

ಸನ್ಮಾನ : ಪ್ರೊ.ಎಂ.ಜಿ. ಈಶ್ವರಪ್ಪ, ಎಸ್.ವಿ.ಸುಮಂಗಲಮ್ಮವೀರಭದ್ರಪ್ಪ, ತಿಪ್ಪೇಸ್ವಾಮಿ ಆರ್, ಹೆಚ್.ಷಡಕ್ಷರಪ್ಪ.


**ಆಶ್ರಯ ಆಸ್ಪತ್ರೆ**

ಡಾ. ದಿನೇಶ್. ಎಂ. ಜಿ,
M.S, M.ch, F.M.A.S, F.M.A.O.
ಬಿ. ಜಿ. ಎಸ್ ಗ್ಲೋಬಲ್ ಆಸ್ಪತ್ರೆಯ ಖ್ಯಾತ ವೈದ್ಯರು,
ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು ಮತ್ತು ಉದರ ದರ್ಶಕ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು
ಇವರು 28.11.2020 ರ ಶನಿವಾರದಂದು
ದಾವಣಗೆರೆಯ ಆಶ್ರಯ ಆಸ್ಪತ್ರೆಯಲ್ಲಿ ಲಭ್ಯವಿರುತ್ತಾರೆ.
ನೋಂದಣಿಗಾಗಿ ಕರೆ ಮಾಡಿ
08192 224679
ಸಮಯ -ಬೆಳಿಗ್ಗೆ-11 ಗಂಟೆಯಿಂದ ಮಧ್ಯಾಹ್ನ -2.30 ಗಂಟೆಯವರೆಗೆ



**ಸಾರ್ವಜನಿಕ ತಿಳುವಳಿಕೆ**

ನನ್ನ ಕಕ್ಷಿದಾರರಾದ ಶ್ರೀ ಬಿ.ಎಸ್ ಮರುಳಪ್ಪ ಬಿನ್ ಲೇಟ್ ರೇವಣಸಿದ್ದಪ್ಪ, ಬಸಾಪುರ ಗ್ರಾಮದ ವಾಸಿ, ದಾವಣಗೆರೆ ತಾಲ್ಲೂಕು ಇವರು ಅವರ ಸಹೋದರರಾದ **ಶ್ರೀಯುತರಾದ ಸಿದ್ದನಗೌಡ, ವಿಜಯಕುಮಾರ, ಉಮೇಶ್** ಮತ್ತು ಸಹೋದರಿ ಲೀಲಮ್ಮ ಇವರುಗಳ ಮೇಲೆ ತಮ್ಮ ಒಟ್ಟು ಕುಟುಂಬದ ಆಸ್ತಿಗಳ ಪಾಲು ವಿಭಾಗಕ್ಕೆ ದಾವಣಗೆರೆ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದಾರೆ.ಸದರಿ ದಾವೆಯಲ್ಲಿ ತಮ್ಮ ಸಹೋದರರು ಯಾವುದೇ ಆಸ್ತಿಗಳನ್ನು ಪರಭಾರೆ ಮಾಡಬಾರದೆಂದು ನಿರ್ಬಂಧಕಾಜ್ಞೆ ಸಹ ಬೇಡಿರುತ್ತಾರೆ. ಆದ್ದರಿಂದ ಮೇಲೆ ಹೇಳಿದಂತೆ ನನ್ನ ಕಕ್ಷಿದಾರರ ಸಹೋದರರೊಂದಿಗೆ ಯಾರಾದರು ವ್ಯವಹಾರ ಮಾಡಿದ್ದಲ್ಲಿ ವೃಥಾ ಕಷ್ಟ-ನಷ್ಟಗಳಿಗೆ ಗುರಿಯಾಗುತ್ತಾರೆ ತಿಳಿಯಿರಿ.

ಎನ್.ರಾಮದಾಸ್ ವಕೀಲರು
ಶ್ರೀನಿವಾಸ ಫಾರ್ಮಸಿ ಬಿಲ್ಡಿಂಗ್, ನಾರಾಯಣ ರಾವ್ ಹಾಸ್ಪಿಟಲ್ ರೋಡ್, ಚಾಮರಾಜ ಪೇಟೆ ದಾವಣಗೆರೆ.
ಮೊ: 98441 42797

ದಾವಣಗೆರೆ
ದಿನಾಂಕ ; 27.11.2020
ಬಿ.ಎಸ್ ಮರುಳಪ್ಪ
ಕಕ್ಷಿದಾರರು



**ಹಾರ್ದಿಕ ಅಭಿನಂದನೆಗಳು**



ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ (ನಿ)., ದಾವಣಗೆರೆ ಇದರ ಅಧ್ಯಕ್ಷರಾಗಿದ್ದ **ಶ್ರೀ ಶಾಮನೂರು ಕಲ್ಲೇಶಪ್ಪನವರು** ನಿಧನರಾದ ಪ್ರಯುಕ್ತ ಈ ಸಾಮಾನ್ಯ ಕ್ಷೇತ್ರಕ್ಕೆ **ಶ್ರೀ ಎಸ್.ಕೆ. ಪವಿತ್ರ ಬಿನ್ ಎಸ್.ಕಲ್ಲೇಶಪ್ಪ** ಇವರನ್ನು ನಿರ್ದೇಶಕರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.



**ಜನ್ಮದಿನದ ಶುಭಾಶಯಗಳು**



ದಿನಾಂಕ 27.11.2020ರ ಶುಕ್ರವಾರದಂದು ತಮ್ಮ 39ನೇ ವರ್ಷದ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ ವೀರಶೈವ - ಲಿಂಗಾಯತ ಸಮಾಜದ ಮುಖಂಡರೂ, ಅಕ್ಕಿ ವರ್ತಕರ ಸಂಘದ ಉಪಾಧ್ಯಕ್ಷರೂ, ಖ್ಯಾತ ವರ್ತಕರೂ, ಹರ್ಷ ಕಮರ್ಷಿಯಲ್ಸ್ ಮತ್ತು ಜೆ.ಪಿ. ಎಂಟರ್‌ಪ್ರೈಸಸ್, ರೈಸ್ ಕಾರ್ನರ್ ಮಾಲೀಕರೂ, ಆದ

**ಶ್ರೀ ಎಂ.ವಿ. ಜಯಪ್ರಕಾಶ್ ಮಾಗಿ**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು. ಶ್ರೀಯುತರಿಗೆ ಆಯುರಾರೋಗ್ಯ, ಐಶ್ವರ್ಯವನ್ನು ದೇವರು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.


ಶುಭ ಕೋರುವವರು :

- ✦ ಸತೀಶ್ ಹುಬ್ಬಳ್ಳಿ
- ✦ ಎ.ಬಿ. ಬಸವಲಿಂಗ
- ✦ ಪ್ರಸನ್ನ ಪೇಟೆ
- ✦ ಅಣ್ಣಪ್ಪಸ್ವಾಮಿ ಎಸ್.ಜಿ.
- ✦ ರಂಗನಾಥ ಡಿ.
- ✦ ಬಸವರಾಜ ಶಾಸ್ತ್ರಿ
- ✦ ಮಂಜು ಕರೇಶಿವಪ್ಪರ
- ✦ ಸ್ಮಿತ್ (ರಾಧಾ ಟ್ರೇಡರ್)
- ✦ ಗಣೇಶ ಆರ್.ಎಂ.
- ✦ ಷಣ್ಮುಖ ಮಾಳಗಿ
- ✦ ವಿಷ್ಣು ಟ್ರೇಡಿಂಗ್ ಕಂಪನಿ
- ✦ ಬಿ.ವಿ. ವೀರಣ್ಣ
- ✦ ಹಿದಾಯಿತ್ ಸ್ಟೋರ್ಸ್ (ಹರಿಹರ)
- ✦ ಎಂ.ಜಿ.ಎಂ. ಮಹೇಶ್
- ✦ ಆನಂದ್ ಎಂ.ವೈ.
- ✦ ಡಿ.ಎಂ. ಸುರೇಶ್‌ಬಾಬು
- ✦ ಸಂತೋಷ್
- ✦ ಸಿದ್ದೇಶ್ ಬಿಜಾಪುರ
- ✦ ಎಂ.ಕೆ. ನಿಖಿಲ್ ಮಾಗಿ
- ✦ ಬಸವರಾಜ್ ಕಂಚಿಕೇರಿ
- ✦ ಶಂಭಣ್ಣ, ದಾವಣಗೆರೆ
- ✦ ಶಂಭಣ್ಣ, ಹರಿಹರ
- ✦ ವೀರಹನುಮಾನ್ ಆಗ್ರೋ ರೈಸ್ ಟೆಕ್
- ✦ ದೇವರಮನೆ ಶಿವಕುಮಾರ್, ಮಹಾನಗರ ಪಾಲಿಕೆ ಸದಸ್ಯರು
- ✦ ಕೈಲಾಸಬಾಬು ಮಾಗಿ
- ✦ ಜಗದೀಶ್ (ಬಿ.ಪಿ.ಎಂ.)
- ✦ ಪಂಚಾಕ್ಷರಿ ಆರ್.ಎಂ.
- ✦ ಸಿದ್ದೇಶ್ ವೇದಮೂರ್ತಿ (ವಿನಾಯಕ ರೈಸ್ ಮಿಲ್)
- ✦ ಮಂಜುನಾಥ (ಬಿ.ಪಿ.ಎಂ.)
- ✦ ವಿನಯ್ (ಬಿ.ಪಿ.ಎಂ.)
- ✦ ಸಿದ್ದು ಮಾಳಗಿ (ಎಂ.ಪಿ.)
- ✦ ಹಲುವಾಗಲು ರುದ್ರಣ್ಣ
- ✦ ಹಲುವಾಗಲು ಶಿವಣ್ಣ
- ✦ ಜಿ.ಬಿ. ಉಮೇಶ್
- ✦ ಸತೀಶ್ ಹತ್ತಿ ಮತ್ತೂರು (ಹಾವೇರಿ)
- ✦ ಗಿರೀಶ್ (ಕಮಲ್ ಎಂಟರ್‌ಪ್ರೈಸಸ್)
- ✦ ವಿನಯ್ ಕರಮುಡಿ
- ✦ ಪರಶುರಾಮ್ ಪಿ.ಎಸ್., ರೈಸ್ ಬ್ರೋಕರ್.
- ✦ ವಿಶ್ವನಾಥ್ ಬಾದಾಮಿ
- ✦ ಜಯರಾಜ್ ಮೇಟಿ
- ✦ ಮಲ್ಲಿಕಾರ್ಜುನ ಟಿ.ಎಸ್.
- ✦ ಕುಮಾರಸ್ವಾಮಿ ತೊಗಲೇರಿ

ಚೌಕಿಪೇಟೆ ಮತ್ತು ಗುಜರಿ ಲೈನ್ ಅಕ್ಕಿ ನುಚ್ಚಿನ ವರ್ತಕರು ಹಾಗೂ ಬ್ರೋಕರ್‌ಗಳು, ದಾವಣಗೆರೆ



**ಅಭಿನಂದನೆಗಳು**



ಬ್ಯಾಂಕಿನ ಹಿರಿಯ ನಿರ್ದೇಶಕರೂ, ಅಂಗವಿಕಲರ ಆಶಾಕಿರಣ ಟ್ರಸ್ಟ್‌ನ ಅಧ್ಯಕ್ಷರೂ, ಪ್ರಾಣಿ ದಯಾ ಸಂಘ - ಗೋ ಶಾಲೆಯ ಗೌರವ ಅಧ್ಯಕ್ಷರೂ, ಕಲಾ ಪ್ರಕಾಶ ವೃಂದ ಸಹಕಾರ ಸಮುದಾಯ ಭವನದ ಉಪಾಧ್ಯಕ್ಷರೂ, ಜೈನ್ ಸಮಾಜದ ಅಧ್ಯಕ್ಷರೂ ಆದ

**ಶ್ರೀ ರಮಣ್‌ಲಾಲ್ ಪಿ. ಸಂಘವಿ**

ಇವರ ಸಾಮಾಜಿಕ ಸೇವೆಯನ್ನು ಗುರುತಿಸಿ, ದಾವಣಗೆರೆ ಜಿಲ್ಲಾಡಳಿತದಿಂದ ಆಚರಿಸಲ್ಪಡುವ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 'ಕರ್ನಾಟಕ ರಾಜ್ಯೋತ್ಸವ' ಗೌರವಕ್ಕೆ ಭಾಜನರಾಗಿರುವ ಶ್ರೀಯುತರಿಗೆ ನಮ್ಮೆಲ್ಲರ ಹಾರ್ದಿಕ ಅಭಿನಂದನೆಗಳು.

ಶ್ರೀ ಎನ್.ಎ. ಮುರುಗೇಶ್ – ಅಧ್ಯಕ್ಷರು
ಶ್ರೀ ಕಿರುವಾಡಿ ವಿ. ಸೋಮಶೇಖರ್ – ಉಪಾಧ್ಯಕ್ಷರು

ನಿರ್ದೇಶಕರುಗಳು :

- ✦ ಶ್ರೀ ವೀರಣ್ಣ ಎಸ್.ಕೆ. ✦ ಶ್ರೀ ಕುಬೇರಪ್ಪ ಎ.ಹೆಚ್ ✦ ಶ್ರೀಮತಿ ಜಯಮ್ಮ ಪರಶುರಾಮಪ್ಪ
- ✦ ಶ್ರೀ ಕೃಷ್ಣಾಸಾ ಭೂತೆ ✦ ಶ್ರೀ ಶಂಕರ್ ಖಟಾವ್‌ಕರ್ ✦ ಶ್ರೀ ಪ್ರಭು ಪ್ರಸಾದ್ ಎಸ್.ಕೆ.
- ✦ ಶ್ರೀಮತಿ ಶಶಿಕಲಾ ರುದ್ರಯ್ಯ ಪಿ.ಎಂ. ✦ ಶ್ರೀ ಜ್ಯೋತಿ ಪ್ರಕಾಶ್ ಕೆ.ಎಂ ✦ ಶ್ರೀಮತಿ ಅನಿಲಾ ಇಂಧೂದರ್ ನಿಶಾನಿಮಠ್
- ✦ ಶ್ರೀ ವೆಂಕಪ್ಪ ಪಿ.ಹೆಚ್. ✦ ಶ್ರೀ ನಾಗೇಂದ್ರಚಾರಿ ಬಿ. ✦ ಶ್ರೀ ಶಿವಯೋಗಪ್ಪ ಕೆ.ಹೆಚ್.

ಪ್ರಧಾನ ವ್ಯವಸ್ಥಾಪಕರು : ✦ ಶ್ರೀ ಶಿವಲಿಂಗಸ್ವಾಮಿ ಎಂ.

ಮತ್ತು ಬ್ಯಾಂಕ್‌ನ ಎಲ್ಲಾ ಸಿಬ್ಬಂದಿ ವರ್ಗದವರು ಹಾಗೂ ಕಾಮಧೇನು ಠೇವಣಿ ಸಂಗ್ರಹಕಾರರು

ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.

